ಇಲಾಖೆ / ವಿಷಯ: DEPARTMENT / SUBJECT: ಹೊಸ ರಾಜ್ಯಪಾಲರ ನೇಮಕ

ಪತ್ರಿಕೆಯ ಹೆಸರು : NAME OF THE NEWS PAPER : ಸಂಯುಕ್ತ ಕರ್ನಾಟಕ     ದಿನಾಂಕ : DATE : 16/07/2019

## ಕಲ್‌ರಾಜ್ ಹಿಮಾಚಲದ ಹೊಸ ರಾಜ್ಯಪಾಲ, ಗುಜರಾತ್‌ಗೆ ದೇವವ್ರತ



ನವದೆಹಲಿ: ಬಿಜೆಪಿ ಹಿರಿಯ ನಾಯಕ ಕಲ್‌ರಾಜ್ ಮಿಶ್ರಾ ಅವರನ್ನು ಹಿಮಾಚಲ ಪ್ರದೇಶ ನೂತನ ರಾಜ್ಯಪಾಲರಾಗಿ ನೇಮಕ ಮಾಡಲಾಗಿದ್ದು, ಹಾಲಿ ರಾಜ್ಯಪಾಲ ಆಚಾರ್ಯ ದೇವವ್ರತ ಅವರನ್ನು ಗುಜರಾತ್ ರಾಜ್ಯಪಾಲರಾಗಿ ನೇಮಿಸಲಾಗಿದೆ. 78 ವರ್ಷದ ಕಲ್‌ರಾಜ್ ಮಿಶ್ರಾ ಅವರು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಮೊದಲ ಅವಧಿಯ ಸರಕಾರದಲ್ಲಿ ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಸಚಿವರಾಗಿದ್ದರು. ವಯೋಮಿತಿ 75 ವರ್ಷ ದಾಟಿದ ಹಿನ್ನೆಲೆಯಲ್ಲಿ ಅವರು 2017ರಲ್ಲಿ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಗುಜರಾತ್ ರಾಜ್ಯಪಾಲ ಒ.ಪಿ. ಕೊಹ್ಲಿ ಅವರು ಸೋಮವಾರ ನಿವೃತ್ತಿಯಾಗುತ್ತಿದ್ದು, ಅವರ ಸ್ಥಾನವನ್ನು 60 ವರ್ಷದ ಆಚಾರ್ಯ ದೇವವ್ರತ ತುಂಬಲಿದ್ದಾರೆ. 2015ರಲ್ಲಿ ದೇವವ್ರತ ಅವರನ್ನು ಹಿಮಾಚಲ ಪ್ರದೇಶ ರಾಜ್ಯಪಾಲರಾಗಿ ನೇಮಿಸಲಾಗಿತ್ತು.